# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **2822** |
| ಸದಸ್ಯರ ಹೆಸರು | ಶ್ರೀ ಸುನಿಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 29.03.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಾರ್ವಜನಿಕರು ಮರಳನ್ನು ಪಡೆಯಲು ಸರ್ಕಾರ ನಿಗದಿಪಡಿಸಿರುವ ಮೊತ್ತವೆಷ್ಟು; ಇದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮರಳು ನಿಕ್ಷೇಪಗಳಲ್ಲಿ ಸಾರ್ವಜನಿಕರಿಗೆ ಮರಳು ವಿತರಿಸಲಾಗಿದೆ; ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು; ಮರಳು ಪಡೆಯಲು ಇರುವ ಮಾನದಂಡಗಳೇನು; (ಮರಳು ನೀತಿಯ ಸಂಪೂರ್ಣ ವಿವರ ನೀಡುವುದು) | • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಂತೆ ಟೆಂಡರ್-ಕಂ-ಹರಾಜು ಮೂಲಕ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಮಂಜೂರಾದ ಮರಳು ಗುತ್ತಿಗೆ ಪ್ರದೇಶಗಳ ಮರಳಿಗೆ ಸಂಬಂಧಪಟ್ಟಂತೆ ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತ, ಮರಳು ಗಣಿಗಾರಿಕೆಗೆ ತಗಲುವ ವೆಚ್ಚ, ಲಾಭಾಂಶ ಹಾಗೂ ಇತರೆ ವೆಚ್ಚಗಳನ್ನು ಸೇರಿಸಿ ಆಯಾ ಜಿಲ್ಲಾ ಮರಳು ಸಮಿತಿಯಿಂದ ಮರಳು ದರಗಳನ್ನು ನಿಗದಿಪಡಿಸಲಾಗಿರುತ್ತದೆ.<br>ವಿವರಗಳನ್ನು ಅನುಬಂಧ-**1** ರಲ್ಲಿ ನೀಡಲಾಗಿದೆ.<br>• IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿಗಳ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಹಾಗೂ ಅವುಗಳ ಹಿನ್ನೀರಿನ ಪ್ರದೇಶದಲ್ಲಿ ತೆಗೆದು ವಿಲೇವಾರಿ ಮಾಡುವ ಪ್ರತಿ ಟನ್ ಮರಳಿಗೆ ₹ 700/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br>• I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಗಳಿಗೆ ₹ 300/-ಗಳು ನಿಗದಿಪಡಿಸಲಾಗಿರುತ್ತದೆ.<br>• ಕಳೆದ ಮೂರು ವರ್ಷಗಳಲ್ಲಿ ಮರಳು ಬ್ಲಾಕ್ ಗಳಿಂದ ಸರ್ಕಾರಿ ಹಾಗೂ ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಸಲಾಗಿರುವ ಮರಳಿನ ಪ್ರಮಾಣ, ಸರ್ಕಾರಕ್ಕೆ ಜಮೆಯಾಗಿರುವ ರಾಜಧನ ಹಾಗೂ ಇತರೆ ಅನ್ವಯಿಕ ಶುಲ್ಕಗಳ ವಿವರಗಳನ್ನು ಅನುಬಂಧ-**2** ರಲ್ಲಿ ನೀಡಲಾಗಿದೆ.<br>• ಹೊಸ ಮರಳು ನೀತಿ, 2020 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಲ್ಲಿ ಸಾರ್ವಜನಿಕರಿಗೆ ಆನ್ ಲೈನ್ (ಮರಳು ಮಿತ್ರ) ವ್ಯವಸ್ಥೆಯಡಿ ಮರಳು ಬುಕಿಂಗ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |

<table>
<tr><td></td><td></td><td>

• ಅದರಂತೆ ಸಾರ್ವಜನಿಕರು ಮೊಬೈಲ್ ಆ್ಯಪ್ (ಮರಳು ಮಿತ್ರ) ಅಥವಾ www.sand.karnataka.gov.in ವೆಬ್ ಪೋರ್ಟಲ್ ನಲ್ಲಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆಯೊಂದಿಗೆ ನೊಂದಾಯಿಸಿ ಅವಶ್ಯಕತೆಗೆ ತಕ್ಕಂತೆ ಮರಳಿನ ಮಾರಾಟ ದರ, ಸಾಗಾಣಿಕೆ ವೆಚ್ಚ ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮರಳನ್ನು ಪಡೆಯಬಹುದಾಗಿರುತ್ತದೆ.

</td></tr>
<tr><td>ಆ)</td><td>ಕಲಬುರಗಿ ಜಿಲ್ಲೆಯಲ್ಲಿ ಯಾವ ಯಾವ ಕಲ್ಲು ಗಣಿಗಾರಿಕೆ ಕ್ರಷರ್ ಗಳಿಂದ ಸರ್ಕಾರಕ್ಕೆ ಎಷ್ಟು ರಾಜಧನ ಸಂದಾಯವಾಗಿದೆ (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)</td><td>

ಕಲಬುರಗಿ ಜಿಲ್ಲೆಯಲ್ಲಿ ಮಂಜೂರಾಗಿರುವ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್‌ಗಳಿಂದ ಕಳೆದ ಮೂರು ವರ್ಷಗಳಲ್ಲಿ ₹ 1714.25 ಲಕ್ಷಗಳ ರಾಜಧನ ಸಂಗ್ರಹಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

(₹ ಲಕ್ಷಗಳಲ್ಲಿ)

<table>
<tr><th>ಕ್ರ. ಸಂ</th><th>ವರ್ಷ</th><th>ಸಂಗ್ರಹವಾದ ಮೊತ್ತ</th></tr>
<tr><td>1</td><td>2019-20</td><td>611.19</td></tr>
<tr><td>2</td><td>2020-21</td><td>679.28</td></tr>
<tr><td>3</td><td>2021-22 (ಫೆಬ್ರುವರಿ ಅಂತ್ಯಕ್ಕೆ)</td><td>423.78</td></tr>
<tr><td colspan="2">ಒಟ್ಟು</td><td>1714.25</td></tr>
</table>

</td></tr>
<tr><td>ಇ)</td><td>ಈ ಕಲ್ಲು ಗಣಿಗಾರಿಕೆಗೆ ಓಡಾಡುವ ಭಾರಿ ವಾಹನಗಳಿಂದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು)</td><td>ಇತರೆ ವಾಹನಗಳನ್ನು ಒಳಗೊಂಡಂತೆ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡುವ ವಾಹನಗಳು ಸಹ ಸಾರ್ವಜನಿಕ ಬಳಕೆ ರಸ್ತೆಯಲ್ಲಿ ಸಂಚರಿಸುತ್ತಿರುತ್ತವೆ. ಕಲಬುರಗಿ ಜಿಲ್ಲೆಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳಡಿ ನೇರ ಮತ್ತು ಪರೋಕ್ಷ ಗಣಿ ಬಾಧಿತ ಪ್ರದೇಶದ ಅಭಿವೃದ್ಧಿಗೆ ಅನುದಾನ ಒದಗಿಸಲಾಗುತ್ತಿದೆ.</td></tr>
<tr><td>ಈ)</td><td>ಕಲಬುರಗಿ ಜಿಲ್ಲೆಯಲ್ಲಿ ಬರುವ ಸಿಮೆಂಟ್ ಕಾರ್ಖಾನೆಗಳಿಂದ ಸರ್ಕಾರಕ್ಕೆ ಬರುವ ರಾಜಧನ ಎಷ್ಟು; ಈ ಕಾರ್ಖಾನೆಗಳಿಂದ ಸಂಚರಿಸುವ ವಾಹನಗಳಿಂದ ಹಾಳಾದ ರಸ್ತೆಗಳ ಪ್ರಮಾಣ ಎಷ್ಟು ಮತ್ತು ಈ ಸಿಮೆಂಟ್ ಕಾರ್ಖಾನೆಗಳ</td><td>

ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಲ್ಲಿ ಸುಣ್ಣದ ಕಲ್ಲು ಗಣಿಗಾರಿಕೆಯಿಂದ ಸರ್ಕಾರಕ್ಕೆ ಒಟ್ಟು ₹ 69437.00 ಲಕ್ಷಗಳ ರಾಜಧನ ಸಂಗ್ರಹವಾಗಿದ್ದು, ವಿವರಗಳು ಈ ಕೆಳಗಿನಂತಿದೆ.

(₹ ಲಕ್ಷಗಳಲ್ಲಿ)

<table>
<tr><th>ಕ್ರ.ಸಂ</th><th>ವರ್ಷ</th><th>ಸಂಗ್ರಹವಾದ ಮೊತ್ತ</th></tr>
<tr><td>1</td><td>2019-20</td><td>23549.00</td></tr>
<tr><td>2</td><td>2020-21</td><td>21972.00</td></tr>
<tr><td>3</td><td>2021-22 (ಫೆಬ್ರುವರಿ-22ಅಂತ್ಯಕ್ಕೆ)</td><td>23916.00</td></tr>
<tr><td colspan="2">ಒಟ್ಟು</td><td>69437.00</td></tr>
</table>

</td></tr>
</table>

<table>
<tr>
<td></td>
<td>ಧೂಳಿನಿಂದ ರೈತರ ಬೆಳೆ ಹಾನಿಯಾಗುತ್ತಿರುವ ಮತ್ತು ಈ ಕಾರ್ಖಾನೆಗಳ ಸುತ್ತ ಮುತ್ತ ವಾಸಿರುತ್ತಿರುವ ಜನರ ಆರೋಗ್ಯ ಕೂಡಾ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಮಾಹಿತಿ ನೀಡುವುದು)</td>
<td>ಸಿಮೆಂಟ್ ಕಾರ್ಖಾನೆಗಳು ನೀಡಿರುವ ಮಾಹಿತಿಯಂತೆ ಕಾರ್ಖಾನೆಗಳ ಚಟುವಟಿಕೆಗಳಿಂದ ಉತ್ಪಾದನೆಗೊಳ್ಳುವ ಧೂಳಿನಿಂದ ರೈತರ ಬೆಳೆ ಹಾನಿ ಹಾಗೂ ಸುತ್ತಮುತ್ತಲಿನ ಜನರ ಆರೋಗ್ಯ ಸಮಸ್ಯೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ:-<br>➢ ಸಿಮೆಂಟ್ ಮಾರಾಟದಿಂದ ಪ್ರತಿ ವರ್ಷ ಬಂದ ಲಾಭಾಂಶದ ಮೊತ್ತದಲ್ಲಿ ಶೇ. 2 ರಷ್ಟು ಮೊತ್ತವನ್ನು CSR Activities ಗಳಡಿ ಕಾರ್ಖಾನೆಯ 10 ಕಿ.ಮೀ ವ್ಯಾಪ್ತಿಯಲ್ಲಿ ಹಾನಿಯಾಗಿರುವ ಪ್ರದೇಶಗಳ ಪರಿಸರ ಪುನರ್ ನಿರ್ಮಾಣ, ಚೆಕ್ ಡ್ಯಾಮ್, ಬದು ನಿರ್ಮಾಣ, ಕೆರೆ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ವಾಹನ ಓಡಾಟದ ಧೂಳನ್ನು ನಿಯಂತ್ರಿಸಲು ನೀರು ಸಿಂಪಡಿಸುವ ಕಾರ್ಯವನ್ನು ಸಹ ಕೈಗೊಳ್ಳಲಾಗಿದೆ.<br>➢ ಗಣಿ ಕೆಲಸ ಮಾಡುವ ಕಾರ್ಮಿಕರಿಗೆ ಪಿ.ಪಿ.ಇ ಕಿಟ್, ವೈದ್ಯಕೀಯ ಪರೀಕ್ಷೆ, ಆರೋಗ್ಯ ವಿಮೆ ಸೌಲಭ್ಯ ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಗಳನ್ನು ನಡೆಸಲಾಗುತ್ತಿದೆ.<br>➢ ಗಣಿ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೋಸ್ಕರ ವೈದ್ಯಕೀಯ ಪರೀಕ್ಷೆ, ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತಿದೆ.<br>ಇದಲ್ಲದೆ, ಗಣಿ ಗುತ್ತಿಗೆಗಳಿಂದ ಸಂಗ್ರಹವಾದ ರಾಜಧನದ 30% ಹಾಗೂ ಹರಾಜು ಮೂಲಕ ನೀಡಿರುವ ಗಣಿ ಗುತ್ತಿಗೆಗಳಿಂದ 10% ಡಿ.ಎಮ್.ಎಫ್ ಮೊತ್ತವನ್ನು ಸಂಗ್ರಹಿಸಲಾಗುತ್ತಿದ್ದು, ಸದರಿ ನಿಧಿಯ ಮುಖಾಂತರ ಗಣಿಗಾರಿಕೆಯಿಂದ ಭಾದಿತಗೊಂಡಿರುವ ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ.</td>
</tr>
<tr>
<td>ಉ)</td>
<td>ಕಲಬುರಗಿ ಜಿಲ್ಲೆಯಲ್ಲಿ ಡಿ.ಎಂ.ಎಫ್ ನಿಂದ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾದ ಹಣವೆಷ್ಟು; ಈ ಡಿ.ಎಂ.ಎಫ್ ವನ್ನು ಯಾವ ಯಾವ ಯೋಜನೆಗಳಿದೆ ಮತ್ತು ಖರ್ಚಾದ ಹಣವೆಷ್ಟು; (ಕಳೆದ ಮೂರು ವರ್ಷಗಳ ಅವಧಿಯ ಮಾಹಿತಿ ನೀಡುವುದು)</td>
<td>ಕಲಬುರಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ 2015-16ನೇ ಸಾಲಿನಿಂದ ಡಿ.ಎಂ.ಎಫ್ ಮೊತ್ತವನ್ನು ಸಂಗ್ರಹಿಸಲಾಗುತ್ತಿದೆ. ಅದರಂತೆ 2021-22ನೇ ಸಾಲಿನ ಫೆಬ್ರವರಿ-2022 ರ ಅಂತ್ಯಕ್ಕೆ ಒಟ್ಟು ₹ 41654.18 ಲಕ್ಷಗಳ ಮೊತ್ತವನ್ನು ಸಂಗ್ರಹಿಸಿದ್ದು, ಕಳೆದ ಮೂರು ವರ್ಷಗಳಲ್ಲಿ ₹ 19182.50 ಲಕ್ಷಗಳ ಮೊತ್ತ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಗಿನಂತಿದೆ.<br>(₹ ಲಕ್ಷಗಳಲ್ಲಿ)
<table>
<tr><th>ಕ್ರ.ಸಂ</th><th>ವರ್ಷ</th><th>ಸಂಗ್ರಹವಾದ ಮೊತ್ತ</th></tr>
<tr><td>1</td><td>2019-20</td><td>5797.49</td></tr>
<tr><td>2</td><td>2020-21</td><td>6386.22</td></tr>
<tr><td>3</td><td>2021-22 (ಫೆಬ್ರುವರಿ-22)</td><td>6998.79</td></tr>
<tr><td colspan="2">ಒಟ್ಟು</td><td>19182.50</td></tr>
</table>
</td>
</tr>
</table>

ಕಲಬುರಗಿ ಜಿಲ್ಲೆ ಗಣಿ ಬಾದಿತ ಪ್ರದೇಶಗಳ ಅಭಿವೃದ್ಧಿಗಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನಡಿ ಕೈಗೊಂಡ ಯೋಜನೆ ಮತ್ತು ಖರ್ಚಾದ ಮೊತ್ತದ ವಿವರಗಳು ಈ ಕೆಳಗಿನಂತಿದೆ.

(₹ ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ | ಖರ್ಚಾದ ಮೊತ್ತ |
|---|---|---|
| 1 | ಕುಡಿಯುವನೀರು | 862.11 |
| 2 | ಶಿಕ್ಷಣ | 1037.78 |
| 3 | ಇಂಧನ ಮತ್ತು ಜಲಾನಯನ ಅಭಿವೃದ್ಧಿ | 1077.29 |
| 4 | ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ | 848.84 |
| 5 | ಆರೋಗ್ಯ | 662.06 |
| 6 | ನೀರಾವರಿ | 974.92 |
| 7 | ಭೌತಿಕ ಮೂಲಸೌಕರ್ಯ | 2855.27 |
| 8 | ನೈರ್ಮಲ್ಯತೆ | 531.01 |
| 9 | ಕೌಶಲ್ಯ ಅಭಿವೃದ್ಧಿ | 161.25 |
| 10 | ಹಿರಿಯ ನಾಗರಿಕ ಮತ್ತು ವಿಕಲಚೇತನರ ವ್ಯಕ್ತಿಗಳ ಕಲ್ಯಾಣ | 221.70 |
| 11 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ | 363.91 |
| 12 | ಕೋವಿಡ್-19 ವೈರಾಣು ತಡೆಗಟ್ಟಲು | 5950.88 |
| | ಒಟ್ಟು | 15547.02 |

| | | |
|---|---|---|
| ಎ) | ಸರ್ಕಾರ ಈ ಡಿ.ಎಂ.ಎಫ್ ಹಣವನ್ನುಉಪಯೋಗಿಸುವ ಅಧಿಕಾರವನ್ನು ವಿಧಾನ ಸಭಾ ಸದಸ್ಯರಿಗೆ ನೀಡಲಾಗಿದ್ದು, ವಿಧಾನ ಪರಿಷತ್ ಸದಸ್ಯರಿಗೆ ನೀಡದಿರಲು ಕಾರಣವೇನು? (ಮಾಹಿತಿ ನೀಡುವುದು) | ಭಾರತ ಸರ್ಕಾರದ ಗಣಿ ಮಂತ್ರಾಲಯದ ಆದೇಶ ದಿನಾಂಕ 23.04.2021 ರಂತೆ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸದರಿ ಟ್ರಸ್ಟ್ ನಲ್ಲಿ ಒಟ್ಟು 18 ಟ್ರಸ್ಟಿಗಳಿದ್ದು, ಇದರಲ್ಲಿ ಲೋಕಸಭಾ ಸದಸ್ಯರು, ರಾಜ್ಯ ಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು ಇವರೊಂದಿಗೆ ವಿಧಾನ ಪರಿಷತ್ ಸದಸ್ಯರುಗಳು ಸಹ ಟ್ರಸ್ಟಿಗಳಾಗಿರುತ್ತಾರೆ. ಆದರೆ ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಒಂದು ಜಿಲ್ಲೆಯಲ್ಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಟ್ರಸ್ಟಿಗಳಾಗಿರುತ್ತಾರೆ.<br>ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ಮತ್ತು ತಿದ್ದುಪಡಿ ನಿಯಮಗಳನ್ವಯ, ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಗಣಿ ಭಾದಿತ ಪ್ರದೇಶಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆಗಳನ್ನು ತಯಾರಿಸಿ ಅನುಮೋದಿಸುವ ಅಧಿಕಾರವಿರುತ್ತದೆ. |

ಸಂಖ್ಯೆ ಸಿಐ-ಎಂಎಂಎನ್ -165/2022

Halappa B.A.

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ - (1)

| ಜಿಲ್ಲಾ ಮರಳು ಸಮಿತಿಯಿಂದ ಹರಾಜು ಮೂಲಕ ವಿಲೇವಾರಿ ಮಾಡುವ ಪ್ರತಿ ಮೆ.ಟನ್ ಮರಳಿಗೆ ನಿಗಧಿಪಡಿಸಿದ ಮರಳು ಮಾರಾಟ ದರ | | | |
|---|---|---|---|
| ಕ್ರ. ಸಂ. | ಜಿಲ್ಲೆ | ಜಿಲ್ಲಾ ಮರಳು ಸಮಿತಿಯಿಂದ ನಿಗಧಿಪಡಿಸಿದ ಮರಳು ಮಾರಾಟ | ಷರಾ |
| 1 | ದಾವಣಗೆರೆ | 729 | |
| 2 | ಚಿತ್ರದುರ್ಗ | 1200 | |
| 3 | ಶಿವಮೊಗ್ಗ | 400/500 | ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತದ ಮೇಲೆ ರೂ.400/500 |
| 4 | ಚಾಮರಾಜನಗರ | - | |
| 5 | ಹಾಸನ | 200 | ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತದ ಮೇಲೆ ರೂ.200/- |
| 6 | ದಕ್ಷಿಣ ಕನ್ನಡ | 500 | |
| 7 | ಉಡುಪಿ | 600 | |
| 8 | ಕೊಡಗು | 509 | ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತದ ಮೇಲೆ ರೂ.509/- |
| 9 | ಚಿಕ್ಕಮಗಳೂರು | 1173 | |
| 10 | ಕಲಬುರಗಿ | 650 | |
| 11 | ರಾಯಚೂರು | 790 | |
| 12 | ಬಳ್ಳಾರಿ | 1150 | |
| 13 | ಹೊಸಪೇಟೆ (ವಿಜಯನಗರ) | 1150 | |
| 14 | ಯಾದಗಿರಿ | 1400 | |
| 15 | ಕೊಪ್ಪಳ | 910 | |
| 16 | ಬೆಳಗಾವಿ | 150 | ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತದ ಮೇಲೆ ರೂ.150/- |
| 17 | ವಿಜಯಪುರ | 250 | |
| 18 | ಗದಗ | 200 | ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತದ ಮೇಲೆ ರೂ.200/- |
| 19 | ಹಾವೇರಿ | - | |
| 20 | ಬಾಗಲಕೋಟೆ | 950 | |
| 21 | ಉತ್ತರ ಕನ್ನಡ | 700/500 | ರೂ.700/- 8 ರಿಂದ 10 ಚಕ್ರದ ವಾಹನ ರೂ.500/- 4 ರಿಂದ 8 ಚಕ್ರದ ವಾಹನ |

Deputy Director (Min. Admn)
Dept. of Mines & Geology

ರಾಜ್ಯದಲ್ಲಿ ಮರಳು ಬ್ಲಾಕ್ / ಸ್ಟಾಕ್ ಯಾರ್ಡಗಳಿಂದ ಸಾಗಾಣಿಕೆಯಾದ ಮರಳಿನ ಪ್ರಮಾಣ ಹಾಗೂ ಸದರಿ ಮರಳು ಸಾಗಾಣಿಕೆಯಿಂದ ಸಂಗ್ರಹಿಸಲಾದ ರಾಜಧನ & ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತಗಳ ವಿವರ.

2018-19 (ಏಪ್ರಿಲ್ -18 ರಿಂದ ಮಾರ್ಚ್ -2019)

| ಕ್ರ. ಸಂ | ಜಿಲ್ಲೆ | ಮಂಜೂರು ಮಾಡಲಾಗಿರುವ ಗುತ್ತಿಗೆ/ಲೈಸೆನ್ಸ್ /ತತ್ಕಾಲಿಕ ಪರವಾನಿಗೆಗಳ ಸಂಖ್ಯೆ | ವಿಲೇವಾರಿ ಯಾದ ಮರಳಿನ ಪ್ರಮಾಣ ಮೆ.ಟನ್ ಗಳಲ್ಲಿ | ಸಂಗ್ರಹಿಸಲಾದ ರಾಜಧನ (ರೂ.ಲಕ್ಷಗಳಲ್ಲಿ) | ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 1 | ದಾವಣಗೆರೆ | 13 | 142598.00 | 85.56 | 1272.34 |
| 2 | ಚಿತ್ರದುರ್ಗ | 20 | 385641.23 | 231.38 | 1609.88 |
| 3 | ಶಿವಮೊಗ್ಗ | 26 | 194234.00 | 116.54 | 1283.99 |
| 4 | ಮೈಸೂರು | 0 | 0.00 | 0.00 | 0.00 |
| 5 | ಮಂಡ್ಯ | 0 | 86.00 | 0.05 | 0.00 |
| 6 | ಚಾಮರಾಜನಗರ | 1 | 20600.00 | 12.36 | 154.91 |
| 7 | ಹಾಸನ | 23 | 175009.20 | 105.00 | 777.00 |
| 8 | ದಕ್ಷಿಣ ಕನ್ನಡ | 107 | 621892.00 | 373.42 | 112.28 |
| 9 | ಉಡುಪಿ | 105 | 141623.15 | 84.84 | 50.29 |
| 10 | ಕೊಡಗು | 17 | 20456.00 | 12.27 | 131.16 |
| 11 | ಚಿಕ್ಕಮಗಳೂರು | 4 | 121249.00 | 72.75 | 981.07 |
| 12 | ಕಲಬುರಗಿ | 6 | 75471.84 | 45.43 | 447.79 |
| 13 | ರಾಯಚೂರು | 26 | 196790.24 | 118.08 | 1190.49 |
| 14 | ಬೀದರ್ | 0 | 1242.00 | 0.75 | 2.43 |
| 15 | ಬಳ್ಳಾರಿ | 2 | 125609.04 | 81.81 | 477.92 |
|  | ಹೊಸಪೇಟೆ | 12 | 318679.24 | 108.76 | 1059.81 |
| 16 | ಯಾದಗಿರಿ | 4 | 162601.00 | 97.81 | 1006.59 |
| 17 | ಕೊಪ್ಪಳ | 8 | 86012.00 | 51.97 | 279.28 |
| 18 | ಬೆಳಗಾವಿ | 11 | 96280.00 | 57.77 | 911.32 |
| 19 | ವಿಜಯಪುರ | 0 | 28297.55 | 16.98 | 9.17 |
| 20 | ಗದಗ | 45 | 319641.11 | 191.79 | 1050.64 |
| 21 | ಹಾವೇರಿ | 15 | 116631.00 | 69.98 | 896.28 |
| 22 | ಬಾಗಲಕೋಟೆ | 18 | 669200.60 | 401.52 | 181.35 |
| 23 | ಉತ್ತರ ಕನ್ನಡ | 87 | 333100.00 | 192.70 | 96.35 |
| | ಒಟ್ಟು | **550** | **4352944.20** | **2529.52** | **13982.34** |

ಅನುಬಂಧ-2

ರಾಜ್ಯದಲ್ಲಿ ಮರಳು ಬ್ಲಾಕ್ / ಸ್ಟಾಕ್ ಯಾರ್ಡಗಳಿಂದ ಸಾಗಾಣಿಕೆಯಾದ ಮರಳಿನ ಪ್ರಮಾಣ ಹಾಗೂ ಸದರಿ ಮರಳು ಸಾಗಾಣಿಕೆಯಿಂದ ಸಂಗ್ರಹಿಸಲಾದ ರಾಜಧನ & ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತಗಳ ವಿವರ.

2019-20 (ಏಪ್ರಿಲ್ -19 ರಿಂದ ಮಾರ್ಚ್ -2020)

| ಕ. ಸಂ | ಜಿಲ್ಲೆ | ಮಂಜೂರು ಮಾಡಲಾಗಿರುವ ಗುತ್ತಿಗೆ/ಲೈಸನ್ಸ್ /ತತ್ಕಾಲಿಕ ಪರವಾನಿಗೆಗಳ ಸಂಖ್ಯೆ | ವಿಲೇವಾರಿ ಯಾದ ಮರಳಿನ ಪ್ರಮಾಣ ಮೆ.ಟನ್ ಗಳಲ್ಲಿ | ಸಂಗ್ರಹಿಸಲಾದ ರಾಜಧನ | ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ |
|---|---|---|---|---|---|
| | | | | (ರೂ.ಲಕ್ಷಗಳಲ್ಲಿ) | |
| **1** | **2** | **3** | **4** | **5** | **6** |
| 1 | ದಾವಣಗೆರೆ | 18 | 133253.00 | 79.95 | 877.92 |
| 2 | ಚಿತ್ರದುರ್ಗ | 23 | 313450.00 | 188.07 | 1165.78 |
| 3 | ಶಿವಮೊಗ್ಗ | 25 | 130172.00 | 78.11 | 835.82 |
| 4 | ಮಂಡ್ಯ | 0 | 241.00 | 0.15 | 0.07 |
| 5 | ಚಾಮರಾಜನಗರ | 1 | 22338.00 | 13.40 | 135.70 |
| 6 | ಹಾಸನ | 23 | 144190.00 | 86.51 | 756.69 |
| 7 | ದಕ್ಷಿಣ ಕನ್ನಡ | 121 | 502299.00 | 301.38 | 206.40 |
| 8 | ಉಡುಪಿ | 172 | 423077.00 | 253.85 | 178.15 |
| 9 | ಕೊಡಗು | 17 | 11436.00 | 6.86 | 71.68 |
| 10 | ಚಿಕ್ಕಮಗಳೂರು | 3 | 69021.00 | 41.41 | 529.72 |
| 11 | ಕಲಬುರಗಿ | 8 | 60338.00 | 36.20 | 21.89 |
| 12 | ರಾಯಚೂರು | 26 | 306412.00 | 183.85 | 1976.84 |
| 13 | ಬಳ್ಳಾರಿ(ಹೊಸಪೇಟೆ | 14 | 441667.00 | 265.00 | 2428.27 |
| 14 | ಯಾದಗಿರಿ | 4 | 173308.00 | 103.98 | 1050.25 |
| 15 | ಕೊಪ್ಪಳ | 13 | 124643.00 | 74.79 | 56.68 |
| 16 | ಬೆಳಗಾವಿ | 13 | 78321.00 | 47.00 | 300.30 |
| 17 | ವಿಜಯಪುರ | 1 | 5417.00 | 3.25 | 1.62 |
| 18 | ಗದಗ | 55 | 469620.00 | 281.77 | 1166.15 |
| 19 | ಹಾವೇರಿ | 14 | 128208.00 | 76.92 | 799.04 |
| 20 | ಬಾಗಲಕೋಟೆ | 49 | 637385.00 | 382.43 | 210.42 |
| 21 | ಉತ್ತರ ಕನ್ನಡ | 87 | 127435.00 | 60.40 | 30.20 |
| ಒಟ್ಟು | | **687** | **4302231.00** | **2565.28** | **12799.59** |

ಅನುಬಂಧ-02

ರಾಜ್ಯದಲ್ಲಿ ಮರಳು ಬ್ಲಾಕ್ / ಸ್ಟಾಕ್ ಯಾರ್ಡ್‌ಗಳಿಂದ ಸಾಗಾಣಿಕೆಯಾದ ಮರಳಿನ ಪ್ರಮಾಣ ಹಾಗೂ ಸದರಿ ಮರಳು ಸಾಗಾಣಿಕೆಯಿಂದ ಸಂಗ್ರಹಿಸಲಾದ ರಾಜಧನ & ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತಗಳ ವಿವರ.

2020-21 (ಏಪ್ರಿಲ್ -20 ರಿಂದ ಮಾರ್ಚ್ -2021)

| ಕ್ರ. ಸಂ | ಜಿಲ್ಲೆ | ಮಂಜೂರು ಮಾಡಲಾಗಿರುವ ಗುತ್ತಿಗೆ/ಲೈಸನ್ಸ್ /ತಾತ್ಕಾಲಿಕ ಪರವಾನಿಗೆಗಳ ಸಂಖ್ಯೆ | ವಿಲೇವಾರಿಯಾದ ಮರಳಿನ ಪ್ರಮಾಣ ಮೆ.ಟನ್ ಗಳಲ್ಲಿ | ಸಂಗ್ರಹಿಸಲಾದ ರಾಜಧನ (ರೂ. ಲಕ್ಷಗಳಲ್ಲಿ) | ಹೆಚ್ಚುವರಿ ನಿಯತಕಾಲಿಕ ಮೊತ್ತ/ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 1 | ದಾವಣಗೆರೆ | 18 | 46357.00 | 29.35 | 290.59 |
| 2 | ಚಿತ್ರದುರ್ಗ | 23 | 368481.00 | 260.88 | 814.33 |
| 3 | ಶಿವಮೊಗ್ಗ | 25 | 88153.00 | 53.28 | 555.38 |
| 4 | ಮಂಡ್ಯ | 0 | 710.00 | 0.54 | 0.27 |
| 5 | ಚಾಮರಾಜನಗರ | 1 | 4545.00 | 2.73 | 27.61 |
| 6 | ಹಾಸನ | 23 | 71244.00 | 42.95 | 353.65 |
| 7 | ದಕ್ಷಿಣ ಕನ್ನಡ | 120 | 219927.00 | 163.12 | 283.62 |
| 8 | ಉಡುಪಿ | 170 | 396847.00 | 316.60 | 158.30 |
| 9 | ಕೊಡಗು | 17 | 3942.00 | 2.44 | 17.93 |
| 10 | ಚಿಕ್ಕಮಗಳೂರು | 3 | 17088.00 | 10.67 | 137.40 |
| 11 | ಕಲಬುರಗಿ | 10 | 75292.00 | 54.88 | 181.66 |
| 12 | ರಾಯಚೂರು | 27 | 220603.00 | 151.01 | 1713.11 |
| 13 | ಬಳ್ಳಾರಿ | 15 | 171167.00 | 123.94 | 1125.26 |
| 14 | ಬೀದರ್ | 0 | 146.00 | 0.12 | 0.06 |
| 15 | ಯಾದಗಿರಿ | 4 | 44223.00 | 35.38 | 357.32 |
| 16 | ಕೊಪ್ಪಳ | 14 | 94705.00 | 64.72 | 29.28 |
| 17 | ಬೆಳಗಾವಿ | 13 | 40011.00 | 26.47 | 47.50 |
| 18 | ವಿಜಯಪುರ | 1 | 690.00 | 0.55 | 0.28 |
| 19 | ಗದಗ | 55 | 177704.03 | 198.92 | 669.76 |
| 20 | ಹಾವೇರಿ | 14 | 105165.00 | 76.68 | 745.63 |
| 21 | ಬಾಗಲಕೋಟೆ | 49 | 601417.00 | 431.76 | 229.18 |
| 22 | ಉತ್ತರ ಕನ್ನಡ | 86 | 226039.00 | 176.14 | 87.87 |
| | ಒಟ್ಟು | **688** | **2974456.03** | **2223.13** | **7825.99** |

CI-165-MMN-2022

Deputy Director (Min. Admn)